**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 284/2017**

ಸಿ.ಡಬ್ಲ್ಯೂ -50

ಪಿ.ಡಬ್ಲ್ಯೂ -15

ಹೆಸರು : ಶಿವಶಂಕರ

ತಂದೆ:ಗಂಡ : ಶಿವಬಸಪ್ಪ

ವಯಸ್ಸು : 39 ವರ್ಷ

ಉದ್ಯೋಗ : ಪಿ.ಐ, ಮಹಿಳಾ ಪೊ.ಠಾ

ವಾಸಸ್ಥಳ : ಕಲಬುರಗಿ

ದಿನಾಂಕ:05.02.2024

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ನಾನು ದಿ.18.06.2017 ರಿಂದ 11.07.2019 ರವರೆಗೆ ನರೋಣಾ ಪೋಲಿಸ ಠಾಣೆಯಲ್ಲಿ ಪಿ.ಎಸ.ಐ. ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿ.19.07.2016 ರಂದು ಜಿಲ್ಲಾ ಆಸ್ಪತ್ರೆ ಕಲಬುರಗಿಯಲ್ಲಿ ಚಾಸಾ-1 ರವರ ಹೇಳಿಕೆ ಪಡೆದು ಠಾಣೆಗೆ ಕಳುಹಿಸಿ ಅಲಿ ಪ್ರ.ವ.ವನ್ನು ದಾಖಲಿಸಿರುತ್ತಾರೆ. ಮೃತ ವರ್ಷಾ ಗಂಡ ಪ್ರಭಾಕರ ಇವರ ಶವ ಪಂಚನಾಮೆ ಕೈಗೊಂಡಿರುತ್ತೇನೆ. ಸ್ವಪ್ನಿಲ್ ತಂದೆ ಪ್ರಭಾಕರ ಇವರ ಶವಪಂಚನಾಮೆಯನ್ನು ಕೈಗೊಂಡಿರುತ್ತೇನೆ. ಮುಂದಿನ ತನಿಖೆಯನ್ನು ಮಾನ್ಯ ಸಿಪಿಐರವರು ಮಾಡಿರುತ್ತಾರೆ.

ಸಾಕ್ಷಿಗೆ ನಿಪಿ-9 ನ್ನು ತೋರಿಸಿ ಅದರಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮೃತ ವರ್ಷಾರವರ ಶವಪರಿಕ್ಷೆ ವರದಿಯನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ವರದಿಯನ್ನು ನಿಪಿ-31 ಎಂದು, ಸಾಕ್ಷಿಯ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-10 ನ್ನು ತೋರಿಸಿ ಅದರಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮೃತ ಸ್ವಪ್ನಿಲ್ ಶವಪರಿಕ್ಷೆ ವರದಿಯನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ವರದಿಯನ್ನು ನಿಪಿ-32 ಎಂದು, ಸಾಕ್ಷಿಯ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-1 ನ್ನು ತೋರಿಸಿ ಅದರಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

**ಪಾ. ಸವಾಲು:- ಆರೋಪಿತರ ಪರ ಶ್ರೀ ಆರ್.ಜೆ.ಪಿ. ವಕೀಲರಿಂದ:**

ನಾನುಸರ್ಕಾರಿ ಅಸ್ಪತ್ರೆಯಿಂದ ಎಂಎಲಸಿ ಸ್ವಿಕರಿಸಿರುತ್ತೇನೆ. ದಿ.19.07.2016 ರಂದು ಮದ್ಯಾಹ್ನ 12.00 ಗಂಟೆಗೆ ಎಂಎಲಸಿಯನ್ನು ಸ್ವಿಕರಿಸಿದೇನು. ನಾನು ಮದ್ಯಾಹ್ನ 2.30 ಗಂಟೆಗೆ ಅಸ್ಪತ್ರೆಗೆ ತಲುಪಿದೇನು. ಶವ ತನಿಖೆ ಮಾಡಲು ಒಂದು ಗಂಟೆಗಳ ಬೇಕಾಗುತ್ತದೆ. ಶವ ಪಂಚರನ್ನು ಯಾರು ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ನೆನಪಿಲ್ಲ. ನಾನು ಶವ ಪಂಚರ ಮುಖವನ್ನು ಗುರುತಿಸಬಲ್ಲೇ. ಪ್ರಕರಣ 304(ಎ) ಐಪಿಸಿ ಅಡಿಯಲ್ಲಿ ದಾಖಲಾಗಿದ್ದು ನಾನು ಪಿಎಸಐ ಆಗಿ ಕಾರ್ಯ ನಿರ್ವಹಿಸುತ್ತಿದ್ದೇ ನನಗೆ ಭಾಗಶ: ತನಿಖೆ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿ ಘಟನೆಯಲ್ಲಿ 8 ಜನರು ಮೃತಪಟ್ಟ ಕಾರಣ ನಾನು ಇಬ್ಬರ ಶವ ತನಿಖೆಯನ್ನು ಮಾಡಿರುತ್ತೇನೆ ಎಂದು ಹೇಳುತ್ತಾರೆ. ನನಗೆ ಶವ ತನಿಖೆ ಮಾಡುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ತನಿಖಾಧಿಕಾರಿ ಆಗುವ

ಯಾವುದೇಅಧಿಕಾರ ಇರುವುದಿಲ್ಲ ಮೃತಪಟ್ಟವರಿಗೆ ಪರಿಹಾರ ಧನ ಸಿಗಬೇಕು ಎಂಬ ಉದ್ದೇಶದಿಂದ ಸುಳ್ಳು ತನಿಖೆ ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಶವ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.